**O.S. 282-17** **DW-1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 17.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ L M S, ವಕೀಲರಿಂದಃ**

7. ಕೊಪ್ಪಿಕರ ರೋಡ ದಲ್ಲಿರುವ ಸ್ಟೇಟ ಬ್ಯಾಂಕ ಆಫ್ ಹೈದರಾಬಾದ 4 ಜನರ ಹೆಸರಿನಲ್ಲಿ ಇರುವ ಜಂಟಿ ಖಾತೆಯಿಂದ ದಾವಾ ಆಸ್ತಿ ಅನುಕ್ರಮ ಸಂಖ್ಯೆ 6 ನ್ನು ಖರೀದಿ ಮಾಡಲು ಹೋಗಿದೆ ಅಂದರ, ಸ್ವಲ( ಹೋಗಿದೆ ಎಂದು ಹೇಳುತ್ತಾರೆ. ಆ ಕಾಲದಲ್ಲಿ ನನ್ನ ಖಾತೆಯಿಂದ ನೇರವಾಗಿ ಮೋತಿಲಾಲಸಾ ಪಟ್ಟಣ ರವರ ಖಾತೆಗೆ ಹಣವನ್ನು ವರ್ಗಾವಣೆ ಮಾಡಲು ಯಾವುದೇ ತೊಂದರೆ ಇರಲಿಲ್ಲ ಅಂದರೆ, ಆ ಕಾಲಕ್ಕೆ ಆರ್ ಟಿ ಜಿ ಎಸ್ ಇರಲಿಲ್ಲ, ಚೆಕ್ ಮಾತ್ರ ಇತ್ತು ಎಂದು ಹೇಳುತ್ತಾರೆ. ಚೆಕ್ ಬೇಕು ಅಂತಾ ಉಪ-ನೋಂದಣಿ ಅಧಿಕಾರಿಗಳು ಹೇಳುತ್ತಿದ್ದರು. ಮೋತಿಲಾಲಸಾ ಪಟ್ಟಣ ರವರಿಗೆ ಖರೀದಿ ನಗದು ಹಣ 12 ಲಕ್ಷ ರೂ. ಅವರ ಖಾತೆಗೆ ಹಾಕಲು ತೊಂದರೆ ಇರಲಿಲ್ಲ. 4 ಜನರ ಹೂಡಿಕೆ ಹಣದಿಂದ ದಾವಾ ಕ್ರಮ ಸಂಖ್ಯೆ 6 ನ್ನು ಖರೀದಿ ಮಾಡಲಾಗಿದೆ ಅಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ 6 ನ್ನು ಖರೀದಿ ಮಾಡಲು ನನ್ನ ಗಂಡನ ಹಣವು ಸಹ ಇದೆ. ನನ್ನ ಗಂಡ ಅಂದಾಜು 10 ಲಕ್ಷ ರೂ. ಕೊಟ್ಟಿರಬಹುದು. ನನ್ನ ಗಂಡ ಹಣ ಕೊಟ್ಟ ಬಗ್ಗೆ ದಾಖಲೆ ಹಾಜರಪಡಿಸಿದ್ದೇನೆ. ನನ್ನ ಗಂಡ ಹಾಗೂ ನನ್ನ ಹಸೆರಿನಲ್ಲಿರುವ ಜಂಟಿ ಖಾತೆ ದಾಖಲೆ ಕೊಟ್ಟಿದ್ದೇನೆ. ನಿಡಿ.15 ರ ಪ್ರಕಾರ 12 ಲಕ್ಷ ರೂ. ಹಾಗೂ 4 ಮತ್ತು 5 ಲಕ್ಷ ರೂ. ಗಳನ್ನು ನನ್ನ ಗಂಡ ಕೊಟ್ಟಿದ್ದಾರೆ. ದಾವಾ ಕ್ರಮ ಸಂಖ್ಯೆ 6 ಖರೀದಿ ಮಾಡಲು ನನ್ನ ಗಂಡ ಹಣ ಕೊಟ್ಟಿದ್ದಾನೆಂದು ನಮ್ಮ ವಕೀಲರಿಗೆ ಹೇಳಿದ್ದೇನೆ. ಕ್ರಮ ಸಂಖ್ಯೆ 6 ನ್ನು ಖರೀದಿ ಮಾಡುವ ಉದ್ದೇಶ ಏನು ಅಂದರೆ ನಾನು ಹಾಗೂ ಶಿವಶಂಕರ ಜಂಟಿಯಾಗಿ ಅಭಿವೃದ್ಧಿಪಡಿಸಬೇಕೆಂದು ಉದ್ದೇಶವಾಗಿತ್ತು ಅಂದರೆ ಸರಿ. ಸದರಿ ಆಸ್ತಿ ಖರೀದಿ ಮಾಡಲು ಶಿವಶಂಕರ ಶೆಟ್ಟರ ರವರು ಹಣ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ದಾವಾ ಆಸ್ತಿ ಕ್ರಮ ಸಂಖ್ಯೆ 6 ನ್ನು ಖರೀದಿ ಮಾಡಲು ಶಿವಶಂಕರ ಶೆಟ್ಟರ ರವರು ಹಣ ಕೊಟ್ಟಿದ್ದರೂ ಸಹ ಅವರಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಹಾಗೂ ನನ್ನ ಗಂಡ ಮಾತ್ರ ಖರೀದಿ ಪತ್ರ ಮಾಡಿಸಿಕೊಂಡಿದ್ದೇವೆ ಅಂದರೆ ಸರಿಯಲ್ಲ. ಜಂಟಿ ಖಾತೆಯಲ್ಲಿರುವ ಹಣ ಸಾಮೂಹಿಕ ಹಣ ಅಂತಾ ಪೂರ್ವಭಾವನೆ ಅಂದರೆ ಸರಿ. ದಾವಾ ಆಸ್ತಿ ಕ್ರಮಸಂಖ್ಯೆ 6 ರಲ್ಲಿ ವಾದಿ ನಂಃ 1 ಹ ಹಾಗೂ 2 ರವರಿಗೆ ಶೇಕಡಾ 1/4 ರಷ್ಟು ಪಾಲು ಇದೆ ಅಂದರೆ ಸರಿಯಲ್ಲ.

**O.S. 282-17** **DW-1**

8. ವಾದಿ ನಂಃ1 ರವರ ತವರು ಮನೆ ವಿಳಾಸ ರೇಶ್ಮೆ ಅಂದರೆ ಸರಿ. ಅವರು ಧಾರವಾಡ ದವರು ಅಂದರೆ ಸರಿ. ರೇಶ್ಮೆ ಕುಟುಂಬದವರು ಬಹಳ ಶ್ರೀಮಂತರು ಅಂದರೆ ಸರಿಯಲ್ಲ. ಶಿವಶಂಕರ ಶೆಟ್ಟರವರು ರಿಯಲ್ ಎಸ್ಟೇಟ, ಬಿಲ್ಡರ ಹಾಗೂ ಸಿವಿಲ್ ಕಾಂಟ್ರಾಕ್ಟರ ಮಾಡುತ್ತಿದ್ದರು ಅಂದರೆ ಸರಿಯಲ್ಲ. ನಮ್ಮ ತಂದೆ ವಕೀಲರ ವೃತ್ತಿ ಮಾಡುತ್ತಿದ್ದರು, ಜೊತೆಗೆ ಆಸ್ತಿ ಅಭಿವೃದ್ಧಿ ಮಾಡುತ್ತಿದ್ದರು. ನಮ್ಮ ತಂದೆ ರಿಯಲ್ ಎಸ್ಟೇಟ, ಬಿಲ್ಡರ ಹಾಗೂ ಸಿವಿಲ್ ಕಾಂಟ್ರಾಕ್ಟರ ಮಾಡುತ್ತಿರಲಿಲ್ಲ. ನಮ್ಮ ತಂದೆ ಮರಣ ಹೊಂದಿದ ನಂತರ ಶಿವಶಂಕರ ಶೆಟ್ಟರವರು ಮನೆತನ ನೋಡುತ್ತಿದ್ದರು ಅಂದರೆ ಸರಿ. ವಾದಿ ನಂಃ 1 ರವರು ಕಸೂತಿ ಹಾಗೂ ಎಂಬ್ರಾಯಿಡಿಂಗ ಮನೆಯಲ್ಲಿ ಹಾಕುತ್ತಿದ್ದರು ಅಂದರೆ ಗೊತ್ತಿಲ್ಲ. ನಾಗಶೆಟ್ಟಿಕೊಪ್ಪದ ಚಂದ್ರನಾಥನಗರದಲ್ಲಿ 1 ನೇ ವಾದಿ ಹಾಗೂ ಅವರ ಗಂಡ ಆರ್ ಸಿ ಸಿ ಮನೆ ಹಾಗೂ ಖುಲ್ಲಾ ಜಾಗೆ 20 ಲಕ್ಷ ರೂ. ಗಳಿಗೆ ಖರೀದಿ ಮಾಡಿದ್ದರು ಅಂದರೆ ಸರಿಯಲ್ಲ. ನಿಪಿ.23 ರ ಪ್ರಕಾರ ಅವರು ಖರೀದಿ ಮಾಡಿದ್ದಾರೆ ಅಂದರೆ ಸರಿ. ಶಿವಶಂಕರ ಶೆಟ್ಟರವರು ಹಾಗೂ ವಾದಿ ನಂಃ 1 ರವರ ಹಣದಿಂದ ನಿಪಿ.23 ರಲ್ಲಿರುವ ಆಸ್ತಿ ಖರೀದಿ ಮಾಡಿದ್ದಾರೆ ಅಂದರೆ ಸರಿಯಲ್ಲ. ನಿಪಿ.23 ರಲ್ಲಿರುವ ಆಸ್ತಿ ಖರೀದಿ ಮಾಡಲು ಶಿವಶಂಕರ ಶೆಟ್ಟರ ಹಾಗೂ ವಾದಿ ನಂಃ 1 ಮತ್ತು 1 ನೇ ವಾದಿಯ ತಾಯಿ ಕರ್ನಾಟಕ ಬ್ಯಾಂಕ, ಬದಾಮಿನಗರ, ಹುಬ್ಬಳ್ಳಿಯಲ್ಲಿ ಬಂಗಾರ ಅಡವು ಇಟ್ಟು ಸಾಲ ತೆಗೆದುಕೊಂಡಿದ್ದು ಗೊತ್ತಿಲ್ಲ. ಕೌಂಟರ ಕ್ಲೇಮ ಕ್ರಮ ಸಂಖ್ಯೆ ಶೆಡ್ಯೂಲ್ - ಡಿ ಆಸ್ತಿ ಶಿವಶಂಕರ ಶೆಟ್ಟರ ಹಾಗೂ 1 ನೇ ವಾದಿಯ ಆಸ್ತಿ ಅಂದರೆ ಸರಿಯಲ್ಲ. ಸದರಿ ಆಸ್ತಿ ನಮ್ಮ ಹಿರಿಯರಿಂದ ಬಂದಿಲ್ಲ ಅಂದರೆ ಸರಿ. ಈ ಆಸ್ತಿಯಲ್ಲಿ ನನಗೆ ಹಾಗೂ ಉಳಿದ ಪ್ರತಿವಾದಿಗಳು ಹಿಸ್ಸೆ ಕೇಳಲು ಬರುವುದಿಲ್ಲ ಅಂದರೆ ಸರಿಯಲ್ಲ. ನಿಪಿ.23 ರಲ್ಲಿರುವ ಆಸ್ತಿ ಖರೀದಿ ಮಾಡಲು ಜಂಟಿ ಕುಟುಂಬದ ಯಾವ ಯಾವ ಆಸ್ತಿಯಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ಹೇಳಲು ಬರುವುದಿಲ್ಲ. ಯಾವ ಯಾವ ಆಸ್ತಿಯಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ನಾನು ದಾಖಲೆನೋಡಿಲ್ಲ. ನಿಪಿ.23 ರಲ್ಲಿರುವ ಆಸ್ತಿ ಖರೀದಿ ಮಾಡಲು ನನ್ನದು, ನನ್ನ ಗಂಡ ಹಾಗೂ ಉಳಿದ ಪ್ರತಿವಾದಿಗಳ ಹಣ ಹೂಡಿಕೆ ಇಲ್ಲ. ನಿಪಿ.23 ರಲ್ಲಿರುವ ಆಸ್ತಿ ವಾದಿ ನಂಃ 1 ಹಾಗೂ ಅವರ ಗಂಡನ ಆಸ್ತಿ ಇರುವುದರಿಂದ ನಮಗೆ ಪಾಲು ಕೇಳಲು ಬರುವುದಿಲ್ಲ ಅಂದರೆ ಸರಿಯಲ್ಲ. ನನಗೆ ತಿಳವಳಿಕೆ ಬಂದ ನಂತರ ಯಾವ ಯಾವ ಆಸ್ತಿ ಯಿಂದ ಎಷ್ಟು ಆದಾಯ ಬಂದಿದೆ ಎಂದು ಲೆಕ್ಕ ಇಟ್ಟಿಲ್ಲ. ನಮ್ಮ ತಂದೆ ಸಹ ಲೆಕ್ಕ ಇಟ್ಟಿಲ್ಲ.

ಸಂತೋಷ ಶಿವಪುತ್ರಪ್ಪ ರೇಶ್ಮೆ ರವರು 1 ನೇ ವಾದಿಯ ತಮ್ಮ ಅಂದರೆ ಸರಿ. ಸಂತೋಷ ಶಿವಪುತ್ರಪ್ಪ ರೇಶ್ಮೆ ರವರು ಸಾಫ್ಟವೇರ ಇಂಜಿನಿಯರ ಎಂದು ಕೆಲಸ ಮಾಡುತ್ತಿದ್ದಾರೆ ಅಂದರೆ ಗೊತ್ತಿಲ್ಲ. ಅವರು ಅಂದಾಜು 10 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ಅಂದರೆ ಗೊತ್ತಿಲ್ಲ. ನಾನು ಅವರ ಮದುವೆಗೆ ಹೋಗಿಲ್ಲ. ಕೌಂಟರ ಕ್ಲೇಮದಲ್ಲಿ ಕ್ರಮ ಸಂಖ್ಯೆ - 2 ಕ್ಕೆ ಸಂಬಂದಪಟ್ಟಂತೆ ಸಂತೋಷ ಶಿವಪುತ್ರಪ್ಪ ರೇಶ್ಮೆ ರವರು ಹಾಗೂ ಸಂದೀಪ ಶಿವಪುತ್ರಪ್ಪ ರೇಶ್ಮೆ ರವರ ಹೆಸರು ಹೇಳಿದ್ದೇವೆ ಅಂದರೆ ಸರಿ. ಸಂತೋಷ ಶಿವಪುತ್ರಪ್ಪ ರೇಶ್ಮೆ ರವರು ಹಾಗೂ ಸಂದೀಪ ಶಿವಪುತ್ರಪ್ಪ ರೇಶ್ಮೆ ರವರು ಎಲ್ಲಿದ್ದಾರೆ ಹಾಗೂ ಏನು ಕೆಲಸ ಮಾಡುತ್ತಿದ್ದಾರೆಂದು ನಾನು ವಿಚಾರಣೆ ಮಾಡಿಲ್ಲ. ಕೌಂಟರ ಕ್ಲೇಮ ಕ್ರಮಸಂಖ್ಯೆ 2, ಡಿ-ಶೆಡ್ಯೂಲ್ ಆಸ್ತಿ, ಸಂತೋಷ ಶಿವಪುತ್ರಪ್ಪ ರೇಶ್ಮೆ ರವರು ಹಾಗೂ ಸಂದೀಪ ಶಿವಪುತ್ರಪ್ಪ ರೇಶ್ಮೆ ರವರ ಹೆಸರು ಇರುವುದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿದ್ದೇವೆ. ನಾವು ಪ್ರತಿವಾದ ಪತ್ರ ಹಾಗೂ ಕೌಂಟರ ಕ್ಲೇಮ ಬರೆಯಲು ವಕೀಲರಿಗೆ ಮಾಹಿತಿ ನೀಡಿದ್ದೇವೆ. ವಾದಿಗಳು ಹಾಜರಪಡಿಸಿ ದಾಖಲೆಗಳನ್ನು ನಾನು ಸರಿಯಾಗಿ ನೋಡಿಲ್ಲ. ಸಂತೋಷ ಶಿವಪುತ್ರಪ್ಪ ರೇಶ್ಮೆ ರವರು ಹಾಗೂ ಸಂದೀಪ ಶಿವಪುತ್ರಪ್ಪ ರೇಶ್ಮೆ ರವರು ಎಲ್ಲಿದ್ದಾರೆ ಹಾಗೂ ಏನು ಕೆಲಸ ಮಾಡುತ್ತಿದ್ದಾರೆಂದು ತಿಳಿದುಕೊಂಡಿಲ್ಲ. ಅಮೇರಿಕಾ ದೇಶದಲ್ಲಿ ಸಾಕಷ್ಟು ಸಾಫ್ಟವೇರ ಕಂಪನಿಗಳಿವೆ ಅಂದರೆ ಸರಿ. ಅಲ್ಲಿರುವ ಸಾಫ್ಟವೇರ ಕಂಪನಿಯಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಲಕ್ಷಗಟ್ಟಲೆ ವೇತನ ಇದೆ ಅಂದರೆ ಗೊತ್ತಿಲ್ಲ. ಸಂತೋಷ ಶಿವಪುತ್ರಪ್ಪ ರೇಶ್ಮೆ ರವರು ಅಮೇರಿಕಾದಲ್ಲಿ 12 ವರ್ಷಗಳಿಂದ ಸಾಫ್ಟವೇರ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ ಅಂದರೆ ಸರಿಯಲ್ಲ. ಸಂತೋಷ ಶಿವಪುತ್ರಪ್ಪ ರೇಶ್ಮೆ ರವರ ಹೆಂಡತಿ ಶ್ವೇತಾ ಎಂಬುವವರು ದೇಹಲಿಯಲ್ಲಿ ವಿಜ್ಞಾನಿ ಯಾಗಿ ಕೆಲಸ ಮಾಡುವುದು ಗೊತ್ತಿಲ್ಲ. ವಿಜ್ಞಾನಿಯಾಗಿ ಕೆಲಸ ಮಾಡುವುದರಿಂದ ಲಕ್ಷಗಟ್ಟಲೆ ವೇತನ ಇದೆ ಅಂದರೆ ಗೊತ್ತಿಲ್ಲ. ಸಂದೀಪ ಶಿವಪುತ್ರಪ್ಪ ರೇಶ್ಮೆ ರವರು 1 ನೇ ವಾದಿಯ ತಮ್ಮ. ಇವರು ಸಹ ಬೆಂಗಳೂರು ಸಾಫ್ಟವೇರ ಕಂಪನಿಯಲ್ಲಿ ಇಂಜಿನಿಯರರಾಗಿ ಕೆಲಸ ಮಾಡುತ್ತಿದ್ದಾರೆ ಅಂದರೆ ಗೊತ್ತಿಲ್ಲ, ಆತನಿಗೂ ಸಹ ಲಕ್ಷಗಟ್ಟಲೆ ಪಗಾರ ಇದೆ ಅಂದರೆ ಗೊತ್ತಿಲ್ಲ. 1 ನೇ ವಾದಿಯ ಶಕುಂತಲಾ ರವರ ಪರಿಚಯವಿದೆ. ಅವರು ನಿವೃತ್ತ ಮುಖ್ಯೋಪಾಧ್ಯಾಯರು ಅಂದರೆ ಗೊಗತ್ತಿಲ್ಲ. 1 ನೇ ವಾದಿ, 1 ನೇ ವಾದಿಯ ಇಬ್ಬರು ತಮ್ಮಂದಿರು ಹಾಗೂ ಅವರ ಗಂಡ ಕೆಲಸ ಮಾಡುತ್ತಾರೆ ಅಂದರೆ ಗೊತ್ತಿಲ್ಲ. ನಿಪಿ.24 ಖರೀದಿ ಪತ್ರ, ಸಂತೋಷ ಶಿವಪುತ್ರಪ್ಪ ರೇಶ್ಮೆ ಸಂದೀಪ ಶಿವಪುತ್ರಪ್ಪ ರೇಶ್ಮೆ ರವರು ವಾದಿ ನಂ: 1 ರವರ ಹೆಸರಿನಲ್ಲಿದೆ ಅಂದರೆ ಸರಿ.

**O.S. 282-17 DW-1**

ನಿಪಿ.24, ದಿಃ 19.3.2012 ರಂದು 8 ಲಕ್ಷ ರೂ. ಗಳಿಗೆ ಖರೀದಿ ಮಾಡಿದ್ದಾರೆ ಅಂದರೆ ಸರಿ. ಸದರಿ ಆಸ್ತಿ ಖರೀದಿ ಮಾಡಲು ನಿಪಿ.25 ರಲ್ಲಿ ತೋರಿಸಲು ಕಂಪನಿಯಿಂದ 30 ಲಕ್ಷ ರೂ. ಸಾಲ ಮಾಡಿದ್ದರು ಅಂದರೆ ಗೊತ್ತಿಲ್ಲ. ಗುರುದತ್ತ ಕಾಲನಿಯಲ್ಲಿರುವ ಮನೆ ಮೊದಲು ಖುಲ್ಲಾ ಜಾಗೆ ಇತ್ತು ಈಗ ಮನೆ ಕಟ್ಟಿದ್ದೇವೆ ಅಂದರೆ ಸರಿ. ಮನೆ ಕಟ್ಟಲು ಪರವಾನಿಗೆ ಅವರೆ ಪಡೆದಿದ್ದಾರೆ ಅಂದರೆ ಗೊತ್ತಿಲ್ಲ. ಸಾಕ್ಷಿ ನುಡಿಯುವಗಿಂತ ಮುಂಚೆ ಎಲ್ಲಾ ದಾವಾ ಆಸ್ತಿಗಳನ್ನು ನೋಡಿಕೊಂಡು ಬಂದಿದ್ದೇವೆ ಅಂದರೆ ಸರಿ. ಗುರುದತ್ತ ನಗರದಲ್ಲಿರುವ ಮನೆ ಭಾಡಿಗೆ ಕೊಟ್ಟಿದ್ದಾರೆ. ಗುರುದತ್ತ ನಗರದಲ್ಲಿರುವ ಮನೆ ಖರೀದಿ ಮಾಡಲು ನಾನು, ನನ್ನ ಗಂಡ ಉಳಿದ ಪ್ರತಿವಾದಿಗಳು ಹಣ ಕೊಟ್ಟಿಲ್ಲ ಅಂದರೆ ಸರಿ. 30 ಲಕ್ಷ ರೂ. ಸಾಲದ ಹಣಕ್ಕೆ ಸಂತೋಷ ರವರು ಪ್ರತಿ ತಿಂಗಳು 30 ಸಾವಿರ ರೂ. ಕಂತಿನ ಹಣ ಕೊಡುತ್ತಾರೆ ಅಂದರೆ ಗೊತ್ತಿಲ್ಲ. ಈಗ ಸದರಿ ಸಾಲ ಮುಕ್ತಾಯವಾಗಿದೆ ಅಂದರೆ ಗೊತ್ತಿಲ್ಲ. ಗುರುದತ್ತ ನಗರದಲ್ಲಿರುವ ಮನೆ ಸಂತೋಷ, ಸಂದೀಪ ಹಾಗೂ ವಾದಿ ನಂಃ 1 ರವರ ಆಸ್ತಿ ಅಂದರೆ ಸರಿಯಲ್ಲ. ಸದರಿ ಆಸ್ತಿ ಜಂಟಿ ಕುಟುಂಬದ ಆಸ್ತಿ ಅಲ್ಲದ ಕಾರಣ, ನನಗಾಗಲಿ ನನ್ನ ಗಂಡನಿಗಾಗಲಿ ಮತ್ತು ಉಳಿದ ಪ್ರತಿವಾಗಳಿಗೆ ಆಗಲಿ ಹಿಸ್ಸೆ ಕೇಳಲು ಬರುವುದಿಲ್ಲ ಅಂದರೆ ಸರಿಯಲ್ಲ. ಗುರುದತ್ತ ನಗರದಲ್ಲಿರುವ ಮನೆ ಜಂಟಿ ಕುಟುಂಬದ ಆದಾಯದಿಂದ ಕಟ್ಟಲಾಗಿದೆ. ಯಾವ ಜಂಟಿ ಕುಟುಂಬದ ಆಸ್ತಿಯಿಂದ ಎಷ್ಟು ಹಣ ಬಂದಿದೆ ಎಂದು ಗೊತ್ತಿಲ್ಲ. ಎಷ್ಟು ಹಣ ಹೂಡಿಕೆ ಮಾಡಿ ಮನೆ ಕಟ್ಟಿದ್ದಾರೆ ಅಂದರೆ ಗೊತ್ತಿಲ್ಲ. ಗುರುದತ್ತ ನಗರದಲ್ಲಿರುವ ಮನೆ ತಿಂಗಳ ಭಾಡಿಗೆ 1 ಲಕ್ಷ ರೂ. ಇದೆ. ಯಾವ ಏಕತ್ರ ಕುಟುಂಬದಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ಗೊತ್ತಿಲ್ಲ. ನನಗೆ ತಿಳವಳಿಕೆ ಬಂದ ನಂತರ ಯಾವ ಯಾವ ಆಸ್ತಿಯಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ದಾಖಲೆ ಇಟ್ಟಿಲ್ಲ. ನಿಪಿ.24 ರಲ್ಲಿ ವಾದಿ ನಂಃ 1 ಇವರು ಹುಬ್ಬಳ್ಳಿಯಲ್ಲಿರುವುದರಿಂದ ಹಾಗೂ ಅವರಿಗೆ ಅಕ್ಕಳಾಗಬೇಕಾಗಿರುವುದರಿಂದ ಅವರ ಹೆಸರು ನಮೂದು ಮಾಡಿದ್ದಾರೆ ಅಂದರೆ ಸರಿಯಲ್ಲ. ಗುರುದತ್ತ ನಗರದಲ್ಲಿರುವ ಮನೆ ಯನ್ನು ಖರೀದಿ ಮಾಡಲು 1 ನೇ ವಾದಿ ಹಣ ಕೊಟ್ಟಿಲ್ಲ ಅಂದರೆ ಸರಿಯಲ್ಲ. ವಾದ ಪತ್ರದಲ್ಲಿ ತೋರಿಸಿರುವ ಕ್ರಮ ಸಂಖ್ಯೆ 1 ರಿಂದ 6, ಶೆಡ್ಯೂಲ್ - ಬಿ ದಾವಾ ಆಸ್ತಿಗಳು ಏಕತ್ರ ಕುಟುಂಬದ ಆಸ್ತಿಗಳು ಅಂದರೆ ಸರಿಯಲ್ಲ. ಕೌಂಟರ ಕ್ಲೇಮುದಲ್ಲಿ ತೋರಿಸಿರುವ ಆಸ್ತಿಗಳು ಸಂತೋಷ, ಸಂದೀಪ ಹಾಗೂ ವಾದಿ ನಂಃ 1 ರವರ ಆಸ್ತಿ ಇರುವುದರಿಂದ ನಮಗೆ ಹಿಸ್ಸೆ ಕೇಳಲು ಬರುವುದಿಲ್ಲ ಅಂದರೆ ಸರಿಯಲ್ಲ.

**O.S. 282-17** **DW-1**

ನಾನು ಹಾಗೂ ಉಳಿದ ಪ್ರತಿವಾದಿಗಳು ವಾದಿಯ ಗಮನಕ್ಕೆ ಇಲ್ಲದೆ, ಕೆಲವು ಆಸ್ತಿಗಳನ್ನು ಮಾರಾಟ ಮಾಡಿರುವುದರಿಂದ ಅವರಿಗೆ ಬಂಧಾಯಿಸುವುದಿಲ್ಲ ಅಂದರೆ ಸರಿಯಲ್ಲ. ನನ್ನ ಮದುವೆಯಾದಾಗ ನಮ್ಮ ತಂದೆ ಜೀವಂತ ಇರಲಿಲ್ಲ. ನಮ್ಮ ತಂದೆ ಮರಣ ಹೊಂದಿದ ನಂತರ ಶಿವಶಂಕರ ಶೆಟ್ಟರ ರವರು ಮನೆತನೆ ಯಜಮಾನಿಕೆ ಮಾಡಿಕೊಂಡು ಬಂದರು ಅಂದರೆ ಸರಿ. ಎಲ್ಲಾ ದಾವಾ ಆಸ್ತಿಗಳಲ್ಲಿ ವಾದಿಯ ಹಿಸ್ಸೆ ಇದೆ ಅಂದರೆ, ಎರಡು ಆಸ್ತಿಗಳಲ್ಲಿ ಇಲ್ಲವೆಂದು ಹೇಳುತ್ತಾರೆ. ಒಂದು ಆಸ್ತಿ ನನ್ನ ಹಾಗೂ ನನ್ನ ಗಂಡನ ಹೆಸರಿನಲ್ಲಿದೆ ಇದೆ ಹಾಗೂ ಇನ್ನೊಂದು ನನ್ನ ಹಾಗೂ ನನ್ನ ತಾಯಿ ಹೆಸರಿನಲ್ಲಿದೆ, ಆ ಕಾರಣದಿಂದ ಅವರೆಡು ಆಸ್ತಿಗಳಲ್ಲಿ ವಾದಿಗಳ ಹಿಸ್ಸೆ ಇಲ್ಲವೆಂದು ಹೇಳುತ್ತೇನೆ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.